# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 1738/2018

| | |
|---|---|
| ಸಾಕ್ಷಿದಾರರ ಹೆಸರು : | ಚಿಕ್ಕವೆಂಕಟಶೆಟ್ಟಿ |
| ತಂದೆಯ ಹೆಸರು : | ವೀರಶೆಟ್ಟಿ |
| ವಯಸ್ಸು : | 53 ವರ್ಷ |
| ಉದ್ಯೋಗ : | ಎ.ಎಸ್.ಐ ಸುದ್ದಗುಂಟೆ ಪಾಳ್ಯ ಪಿ.ಎಸ್. |
| ವಾಸ : | ತಲಘಟ್ಟಪುರ, ಬೆಂಗಳೂರು. |

**ದಿನಾಂಕ 03/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ನಾನು 2016 ರಿಂದ 2021 ರವರೆಗೆ ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 17/09/2017 ರಂದು ನಾನು ಕರ್ತವ್ಯದಲ್ಲಿದ್ದಾಗ ಚಾಸಾ-11 ರವರು ನನಗೆ ಮತ್ತು ಚಾಸಾ-9 , 10 ಮತ್ತು ಜಯಪ್ರಕಾಶ ಎಂಬ ಸಿಬ್ಬಂದಿಗಳಿಗೆ ಕರೆದು ದೇವರಚಿಕ್ಕನಹಳ್ಳಿ ಡಿಯೋ ಎನಕ್ಲೇವ್ ಅಪಾರ್ಟಮೆಂಟ್ ನ ಖಾಲಿ ಜಾಗದಲ್ಲಿ ಸುಮಾರು 4-5 ಜನರು ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ದರೋಡೆ ಮಾಡಲು ಸಂಚು ಮಾಡುತ್ತಿರುವುದಾಗಿ ಬಾತ್ಮಿದಾರರ ಮುಖಾಂತರ ಬಂದ ಮಾಹಿತಿಯನ್ನು ನಮಗೆ ತಿಳಿಸಿದರು. ಚಾಸಾ-11 ರವರು ಇಬ್ಬರು ಪಂಚರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ವಿಷಯ ತಿಳಿಸಿ ಅವರು ಪಂಚರಾಗಿ ಸಹಕರಿಸಲು ಒಪ್ಪಿದ ನಂತರ ನಮ್ಮೆಲ್ಲರನ್ನು ಸರ್ಕಾರಿ ವಾಹನದಲ್ಲಿ ಸದರಿ ಸ್ಥಳಕ್ಕೆ ಕರೆದುಕೊಂಡು ಹೋದರು.

3. ಸುಮಾರು 20 ಮೀಟರ್ ದೂರನಲ್ಲಿ ವಾಹನವನ್ನು ನಿಲ್ಲಿಸಿ ಮರೆಯಲ್ಲಿ ನಿಂತು ಗಮನಿಸಲಾಗಿ 5 ಜನ ಯುವಕರು ಕೈಗಳಲ್ಲಿ ಮಾರಕಾಸ್ತ್ರಗಳಾದ ದೊಣ್ಣೆ, ಚಾಕು

ಹಾಗೂ ಕಬ್ಬಿಣದ ರಾಡ್ ಗಳನ್ನು ಹಿಡಿದುಕೊಂಡು ದರೋಡೆಗೆ ಸಂಚು ರೂಪಿಸಿಸುತ್ತಿರುವುದನ್ನು ಖಚಿತಪಡಿಸಿಕೊಂಡು, ಚಾಸಾ-11 ರವರು ಎಲ್ಲರೂ ಸುತ್ತುವರಿದು ಹಿಡಿದುಕೊಳ್ಳಲು ಸೂಚಿಸಿರುತ್ತಾರೆ. ಸದರಿ ವ್ಯಕ್ತಿಗಳಲ್ಲಿ ಇಬ್ಬರು ವ್ಯಕ್ತಿಗಳು ಓಡಿ ಹೋದರು, ಉಳಿದ 3 ಜನ ವ್ಯಕ್ತಿಗಳನ್ನು ನಾವು ಹಿಡಿದುಕೊಂಡೆವು. ಚಾಸಾ-9 ಮತ್ತು 11 ರವರು ಹಿಡಿದುಕೊಂಡ ವ್ಯಕ್ತಿಯ ಹೆಸರು ಮೊಹಮ್ಮದ ಸಲ್ಮಾನ್ ಎಂಬುದಾಗಿರುತ್ತದೆ. ಆತನ ಕೈಯಲ್ಲಿ ಒಂದು ಕಬ್ಬಿಣದ ರಾಡ್ ಇರುತ್ತದೆ. ಆತನ ಜೇಬಿನಲ್ಲಿ ಎರಡು ಮೊಬೈಲ್ ಗಳು ಇರುತ್ತವೆ. ಒಂದು ಆಪಲ್ ಫೋನ್ ಮತ್ತು ಇನ್ನೊಂದು ಎಮ್.ಐ ಫೋನ್ ಆಗಿರುತ್ತದೆ. ನಂತರ ಚಾಸಾ-10 ರವರು ಹಿಡಿದುಕೊಂಡ ವ್ಯಕ್ತಿಯ ಹೆಸರು ಮೀನ್ ಅಕ್ರಮ ಆಗಿರುತ್ತದೆ. ಆತನ ಬಳಿ ಒಂದು ಮರದ ದೊಣ್ಣೆ ಇರುತ್ತದೆ. ಆತನ ಜೇಬಿನಲ್ಲಿ ಒಂದು ಮೋಟೋರಾಲಾ ಫೋನ ಮತ್ತು ಮತ್ತೊಂದು ಒನ್ ಪ್ಲಸ್ ಫೋನ ಆಗಿರುತ್ತದೆ. ನಾನು ಮತ್ತು ಜಯಪ್ರಕಾಶ ರವರು ಹಿಡಿದುಕೊಂಡ ವ್ಯಕ್ತಿಯ ಹೆಸರು ಸಯ್ಯದ್ ಅರ್ಹನ್ ಎಂಬುದಾಗಿರುತ್ತದೆ. ಆತನ ಕೈಯಲ್ಲಿ ಒಂದು ಚಾಕು ಇರುತ್ತದೆ. ಸದರಿ 3 ಜನರ ಬಳಿ ಇದ್ದ ಮಾರಕಾಸ್ತ್ರಗಳನ್ನು ಮತ್ತು ಮೊಬೈಲ್ ಗಳನ್ನು ಸ್ಥಳದಲ್ಲಿಯೇ ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಲಾಗಿರುತ್ತದೆ. ಓಡಿ ಹೋದವರ ಬಗ್ಗೆ ವಿಚಾರಿಸಿದಾಗ ಓಡಿ ಹೋದ ವ್ಯಕ್ತಿಗಳ ಹೆಸರು ಮಂಜುನಾಥ ಮತ್ತು ಅಯ್ಯಪ್ಪ ಎಂದು ಹಿಡಿದಿದ್ದ ವ್ಯಕ್ತಿಗಳು ತಿಳಿಸಿರುತ್ತಾರೆ. ಸದರಿ 09.10 ರಿಂದ 10.30 ಗಂಟೆಯವರೆಗೆ ಪಂಚರಾದ ಚಾಸಾ-6 ಮತ್ತು 7 ರವರ ಸಮಕ್ಷಮ ಅಮಾನತ್ತು ಪಂಚನಾಮೆ ಮಾಡಲಾಯಿತು.

4. ನಂತರ 11.00 ಗಂಟೆಗೆ ಹಿಡಿದಿದ್ದ ಆರೋಪಿತರನ್ನು ಮತ್ತು ವಸ್ತುಗಳನ್ನು ಠಾಣೆಗೆ ಕರೆತಂದು ಚಾಸಾ-13 ರವರ ಸಮಕ್ಷಮ ಹಾಜರು ಪಡಿಸಲಾಗಿರುತ್ತದೆ. ಪಂಚನಾಮೆ ಸಹಿತ ವರದಿಯನ್ನು ಚಾಸಾ-11 ರವರು ಚಾಸಾ-13 ರವರಿಗೆ

ನೀಡಿರುತ್ತಾರೆ. ಸದರಿ 3 ಜನ ಆರೋಪಿತರನ್ನು ಹಾಗೂ ವಸ್ತುಗಳನ್ನು ಮತ್ತೆ ನೋಡಿದರೆ ಗುರುತಿಸಬಲ್ಲೆ.

5. ದಿನಾಂಕ 20/10/2017 ರಂದು ಚಾಸಾ-13 ರವರು ನನಗೆ ಮತ್ತು ಚಾಸಾ-9 ರವರಿಗೆ ಈ ಪ್ರಕರಣದ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿತರಾದ ಮಂಜುನಾಥ ಮತ್ತು ಅಯ್ಯಪ್ಪ ರವರನ್ನು ಪತ್ತೆ ಹಚ್ಚಿ ಹಿಡಿದು ತರುವಂತೆ ನಮಗೆ ನೇಮಿಸಿರುತ್ತಾರೆ. ಅದರಂತೆ ನಾವು ಠಾಣಾ ಸರಹದ್ದಿನಲ್ಲಿ ಗಸ್ತು ಮಾಡುತ್ತಾ ಬಾತ್ಮಿದಾರರನ್ನು ಸಂಪರ್ಕಿಸಿ ಸಂಜೆ 06.45 ಗಂಟೆಯ ಸಮಯದಲ್ಲಿ ರೂಪೇನ್ ಅಗ್ರಹಾರ ಮುಖ್ಯ ರಸ್ತೆಯ ಗುಲ್ಬರ್ಗಾ ಕಾಲೋನಿ ಹತ್ತಿರ ನಡೆದುಕೊಂಡು ಹೋಗುತ್ತಿದ್ದ ಒಬ್ಬ ವ್ಯಕ್ತಿಯನ್ನು ಬಾತ್ಮಿದಾರರು ತೋರಿಸಿ ನಾವು ಹುಡುಕುತ್ತಿರುವ ಮಂಜುನಾಥ ಎಂಬ ಆರೋಪಿ ಈತನೇ ಆಗಿರುತ್ತಾನೆ ಎಂದು ತಿಳಿಸಿರುತ್ತಾರೆ. ನಾವು ಇಬ್ಬರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನು ತನ್ನ ಹೆಸರನ್ನು ಮಂಜುನಾಥ ಎಂದು ತಿಳಿಸಿರುತ್ತಾನೆ. ಆತನು ಪ್ರಕರಣದಲ್ಲಿ ಭಾಗವಹಿಸಿರುವುದು ಖಚಿತಪಡಿಸಿಕೊಂಡು ಆತನನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ-13 ರವರ ಮುಂದೆ ಹಾಜರು ಪಡಿಸಿ ವರದಿ ನೀಡಿರುತ್ತೇನೆ. ಸಾಕ್ಷಿಯು ವರದಿಯ ಪ್ರತಿಯನ್ನು ನೋಡಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. **ಆದ್ದರಿಂದ ಸದರಿ ವರದಿಯ ಪ್ರತಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು**. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಈತನೇ ನಾನು ಹಿಡಿದಿದ್ದ ಮಂಜುನಾಥ ಎಂದು ಗುರುತಿಸಿದ್ದಾರೆ.

**ಪಾಟೀ ಸವಾಲುಃ 3ನೇ ಆರೋಪಿ ಪರ ವಕೀಲರಿಂದಃ**

6. ಆರೋಪಿಯನ್ನು ದಿನಾಂಕ 20/10/2017 ರಂದು ರಸ್ತೆಯಲ್ಲಿ ಹಿಡಿದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಆರೋಪಿಯು ನಡೆದುಕೊಂಡು

ಮನೆಗೆ ಹೋಗುತ್ತಿರುವಾಗ ಆತನನ್ನು ಹಿಡಿದುಕೊಂಡಿದ್ದೇವೆ ಎಂದರೆ ಸಾಕ್ಷಿಯು ರಸ್ತೆಯಲ್ಲಿ ಹೋಗುತ್ತಿದ್ದವನನ್ನು ಹಿಡಿದುಕೊಂಡಿದ್ದೇವೆ ಎಂದು ಹೇಳುತ್ತಾರೆ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.